ಇಂದು ದಿಃ **01-06-2024** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು, ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಆರ್.ಎಂ.ಹೆಚ್ ವಕೀಲರಿಂದ ಪ್ರತಿವಾದಿ ನಂಬರ್-1,2,3(ಎ)(ಬಿ), 4(ಎ ದಿಂದ ಡಿ), 5(ಎ)(ಡಿ) ಪರಃ**

ನಾನು 1979-80 ಸಾಲಿನಲ್ಲಿ ಟಿ.ಬಿ ರೋಗದಿಂದ ಬಳಲುತಿದ್ದು, ಅದು ಸುಮಾರು 4-5 ವರ್ಷಕ್ಕಿಂತಲೂ ಹೆಚ್ಚು ಉಲ್ಬಣ ಆಗಿತ್ತು ಎಂದರೆ ಸಾಕ್ಷಿ 4 ತಿಂಗಳು ಮಾತ್ರ ಆಗಿತ್ತು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾನು ಅಸುಂಡಿ ಗ್ರಾಮದಲ್ಲಿ ಇದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ಭಾನುಹಳ್ಳಿಯಲ್ಲಿ ಇದ್ದೆನು ಎಂದು ಹೇಳುತ್ತಾರೆ. 2019 ರಲ್ಲಿ ನಾನು ಮತ್ತು ನನ್ನ ಸಹೋದರ ಸಹೋದರಿಯರು ಪ್ರತ್ಯೇಖ ಮನೆಯಲ್ಲಿ ವಾಸ ಮಾಡಲು ಶುರು ಮಾಡಿದೆವು. ನನ್ನ ದೊಡ್ಡಪ್ಪ ಮರಿಬಸಪ್ಪ ಇವನಿಂದ ನನ್ನ ತಂದೆ ಬಸಪ್ಪ ಇವನಿಗೆ ದಾವಾ ಶೆಡ್ಯೂಲ್ ಎ ಆಸ್ತಿ ಹೊರುತು ಪಡಿಸಿ, ಉಳಿದ ಎಲ್ಲಾ ಆಸ್ತಿಗಳು ಮೃತ್ಯು ಪತ್ರದ ಮುಖಾಂತರ ಬಂತು ಎಂದರೆ ಸರಿಯಲ್ಲ. ಪ್ರತಿವಾದಿಯರು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿಲ್ಲ.

ನನ್ನ ಅಜ್ಜನ ಕಾಲದಲ್ಲಿ 7 ಎಕರೆ 4 ಗುಂಟೆ ಜಮೀನು ಇತ್ತು. ನನ್ನ ಅಜ್ಜನ ಸಹೋದರರಿಗೆ ಎಷ್ಟು ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜನ ಹೆಸರು ಹೊರತು ಪಡಿಸಿ, ನನಗೆ ಆತನ ಸಹೋದರರ ಬಗ್ಗೆ ಮಾಹಿತಿ ಇಲ್ಲ. ದಿನಾಂಕಃ08-06-1979 ರಲ್ಲಿ ಮರಿಬಸಪ್ಪ ಒಂದು ನೊಂದಾಯಿತ ಮೃತ್ಯು ಪತ್ರ ಮಾಡಿಕೊಟ್ಟರು ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯರು ತಮ್ಮ ಕೈಪಿಯತ್ ನಲ್ಲಿ ಪ್ಯಾರ-12 ಜಿ ನಲ್ಲಿ ತಿಳಿಸಿದ ಹಾಗೇ ದಾವಾ ಆಸ್ತಿಗಳು ಪ್ರತಿವಾದಿ 1 ರಿಂದ 5 ರ ಸ್ವಾಧೀನದಲ್ಲಿ ಇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಬಿ ಇದನ್ನು

ನನ್ನ ವೈಧ್ಯಕೀಯ ಖರ್ಚಿಗೆ ನನ್ನ ತಂದೆ ಮಾರಾಟ ಮಾಡಿದರು ಎಂದರೆ ಸರಿಯಲ್ಲ. ದಾವಾ ಆಸ್ತಿ ಸಿ ಇದನ್ನು ನನ್ನ ತಂದೆ 3 ನೇ ಪ್ರತಿವಾದಿಗೆ ದಿನಾಂಕಃ03-09-1988 ರಂದು ನೊಂದಾಯಿತ ಮೃತ್ಯು ಪತ್ರದ ಪ್ರಕಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಶಿವಮ್ಮ ಇವಳ ವಾರಸುದಾರರ ಕಬ್ಜೆಯಲ್ಲಿ ಈ ಆಸ್ತಿ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಡಿ ಮತ್ತು ಇ ಇವುಗಳನ್ನು ಬಸಪ್ಪ ದಿನಾಂಕಃ05-05-1989 ರಂದು ಮೃತ್ಯು ಪತ್ರದ ಮುಖಾಂತರ 2 ನೇ ಪ್ರತಿವಾದಿಗೆ ನೀಡಿದರು ಎಂದರೆ ಸರಿಯಲ್ಲ. ಆತ ಈ ಆಸ್ತಿಗಳ ಕಬ್ಜೆಯಲ್ಲಿದ್ದಾನೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಎಫ್ ಇದನ್ನು ನನ್ನ ತಂದೆ ಬಸಪ್ಪ 3 ನೇ ಪ್ರತಿವಾದಿಗೆ ನೀಡಿದ್ದು, ಅದರಲ್ಲಿ 3 ನೇ ಪ್ರತಿವಾದಿ ಆಶ್ರಯ ಯೋಜನೆಯ ಅಡಿ ಸಾಲ ಪಡೆದು, ಆಕೆ ಮನೆ ಕಟ್ಟಿ ವಾಸ ಇದ್ದಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಜಿ ಇದನ್ನು ದಿನಾಂಕಃ19-06-1957 ರಂದು ಬಸಪ್ಪ ಇವನು ಭಾನುಹಳ್ಳಿ ದೊಡ್ಡ ಗೌಡರ ಅಬ್ಲೂರಪ್ಪನ ಮಗ ಮುರಿಗೆಪ್ಪನಿಂದ ಖರೀದಿ ಮಾಡಿದರು ಎಂದರೆ ಸರಿಯಲ್ಲ. ಸಾಕ್ಷಿ ನಾವೆಲ್ಲರೂ ಸೇರಿ ನಮ್ಮ ತಂದೆಯ ಹೆಸರಿನಲ್ಲಿ ಖರೀದಿ ಮಾಡಿದ್ದೇವು ಎಂದು ಹೇಳುತ್ತಾರೆ. ಈ ಜಿ ಶೆಡ್ಯೂಲ್ ಆಸ್ತಿಯನ್ನು ನನ್ನ ತಂದೆ ದಿನಾಂಕಃ05-05-1989 ರ ವಿಲ್ ಮುಖಾಂತರ 2 ನೇ ಪ್ರತಿವಾದಿಗೆ ಕೊಟ್ಟರು ಎಂದರೆ ಸರಿಯಲ್ಲ.

1979-80 ಇಸವಿಯಲ್ಲಿ ನಾನು ನನ್ನ ಕಾಯಿಲೆಯ ಚಿಕಿತ್ಸೆ ಕುರಿತು ನಾನು ನನ್ನ ಹಿಸ್ಸೆಯ ಬಧಲಾಗಿ ಹಣ ಶೆಡ್ಯೂಲ್ ಎ ಆಸ್ತಿ ಕುರಿತು ಪಡೆದುಕೊಂಡು, ನನ್ನ ಒಟ್ಟು ಕುಟುಂಬದಿಂದ ಪ್ರತ್ಯೇಕಗೊಂಡೆನು ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಅಥವಾ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. ಈಗಾಗಲೇ ನನ್ನ ತಂದೆ ಮೃತ್ಯು ಪತ್ರದ ಮುಖಾಂತರ ತನಗೆ ಮರಿಬಸಪ್ಪನಿಂದ ಬಂದ ಆಸ್ತಿಗಳನ್ನು ಉಳಿದ ಮಕ್ಕಳಿಗೆ ಕೊಟ್ಟಿದ್ದು, ನನಗೆ

ಯಾವುದೇ ಹಕ್ಕು ದಾವಾ ಆಸ್ತಿಗಳಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಿಸ್ಸೆ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಯಾವತ್ತೂ ಒಟ್ಟು ಕುಟುಂಬದ ಸಧಸ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲಿಗೆ 6 ನೇ ಪ್ರತಿವಾದಿ ಸಮಯ ಕೇಳಿದ್ದು ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.